ಮನೆಯೆದುರು ನಿಂತಿತು. ಸುರೇಶ ಗೇಟಿಗೆ ಬೆನ್ನು ಹಾಕಿ ನಿಂತು ರಿಕ್ಷಾದ ಮೇಲ್ಭಾಗವನ್ನು ತೊಳೆಯುತ್ತಿದ್ದ. ರಕ್ಷಾ ರಿಕ್ಷಾದಿಂದಿಳಿಯುತ್ತಿದ್ದಂತೆ ರಸ್ತೆಗೆ ಬೆನ್ನು ಹಾಕಿ ನಿಂತು ರಾಜನನ್ನ ತೊಳೆಯುತ್ತಿದ್ದ ಪೊಪ್ಪನನ್ನು ನೋಡಿದ್ದೇ ಒಂದೇ ನೆಗೆತಕ್ಕೆ ಓಡಿದವಳು, "ಪೊಪ್ಪಾ, ನಾನು ಬಂದುಬಿಟ್ಟೆ. ನಂಗೆ ನೀವು ಬೇಕು. ಅಮ್ಮ ಬೇಕು. ನಾನು ಕಲಿಯಬೇಕು. ಕೆಲಸಕ್ಕೆ ಸೇರ್ಬೇಕು. ನಿಮ್ಮಾಣೆ ನಾನಿನ್ನು ಎಲ್ಲೂ ಹೋಗುದಿಲ್ಲ ಪೊಪ್ಪ" ಅನ್ನುತ್ತ ಸುರೇಶ ಏನು ಎತ್ತ ಎಂದು ಅರ್ಥ ಮಾಡಿಕೊಳ್ಳುವುದರೊಳಗೆ ಅವನ ಬೆನ್ನು ತಬ್ಬಿದಳು. ಆದರೆ, ಅದೇ ವೇಗದಿಂದ ಸುರೇಶ ತಳ್ಳಿದ್ದರಿಂದ ಅಷ್ಟು ದೂರ ಅನಾಮತ್ತು ಬೀಳುತ್ತಿದ್ದವಳನ್ನು ಹಿಂದಿನಿಂದ ಬರುತ್ತಿದ್ದ ಫಕೀರಿಚ್ಚ ಓಡಿ ಬಂದು ಆಧರಿಸದಿರುತ್ತಿದ್ದರೆ ಏನಾದರೊಂದು ಅನಾಹುತವಾಗುತ್ತಿತ್ತು.

**'ಮೋಳೇ, ಅದು ನಿನ್ನಂತವರಿಗಿರುವುದಲ್ಲ. ಸರ್ಕಾರ ಅದನ್ನು ಮಾಡಿದ್ದು ಬೇಡದ ಶಿಶುವನ್ನು ಎಲ್ಲಿಯಾದ್ರು ಬಿಸಾಕಿ ಹೋಗುವವರು ಅಲ್ಲಿ ತಂದು ಬಿಡಲಿ ಅಂತ. ಅಂತಹ ಮಕ್ಕಳನ್ನು ಗವರ್ನ್ಮೆಂಟ್ ಆಸ್ಪತ್ರೆಯಿಂದ ಯಾವುದಾದ್ರೂ ಆಶ್ರಮದವರು ಕೊಂಡು ಹೋಗಿ ಸಾಕ್ತಾರೆ.'**

"ಅನಾಚಾರದವಳೇ, ತೊಲಗಿಲ್ಲಿಂದ. ಬೆಳಗ್ಗೆದ್ದು ನಿನ್ನ ಹಾಳು ಮುಖ ನೋಡ್ಬೇಕಾಯ್ತಲ್ಲ. ಇವಳನ್ನೆಂತದಕೆ ಕರ್ಕೊಂಡ್ಬಂದಿದ್ದು ಫಕೀರಿಚ್ಚ. ಎಳ್ಕೊಂಡ್ಹೋಗಿ ಇಲ್ಲಿಂದ". ಅವನ ಅಬ್ಬರಕ್ಕೆ ಅರೆಕ್ಷಣ ಫಕೀರಿಚ್ಚನೇ ಬೆಚ್ಚಿದ. ಮನೆಯೊಳಗಿದ್ದವರೆಲ್ಲ ಹೊರ ಬಾಗಿಲಿಗೆ ಬಂದು ನಿಂತರು. ದೀಕ್ಷಾ ಅಕ್ಕನನ್ನು ಕಂಡದ್ದೇ ಅವಳತ್ತ ಓಡುವ ತರಾತುರಿಯಲ್ಲಿ ಮೆಟ್ಟಿಲಿಳಿದಳು. ಸುರೇಶ ದೀಕ್ಷಾಳನ್ನ ಹಿಡಿದು ನಿಲ್ಲಿಸಿದ. "ಯಾರಾದ್ರೂ ಒಂದು ಹೆಜ್ಜೆ ಮುಂದಿಟ್ರೆ ಹೆಣ ಬೀಳ್ತದೆ ಇಲ್ಲಿ." ಉದ್ವಿಗ್ನತೆಯಿಂದ ಅವನ ಶರೀರವಿಡೀ ಕಂಪಿಸಲಾರಂಭಿಸಿತ್ತು.

"ನೀವು ನಂಗೆ ಕೆಲಸ ಕೊಟ್ಟ ಧಣಿಗಳು ಅಂತ ಈಗ ಉಪದೇಶ ಮಾಡ್ಲಿಕ್ಕೆ ಬರ್ಬೇಡಿ ಫಕೀರಿಚ್ಚ. ಅಷ್ಟು ಕರುಣೆ ಇದ್ರೆ ನೀವೇ ಅನ್ನ ಹಾಕಿ." ಸುರೇಶನ ತಳ್ಳುವಿಕೆಯಲ್ಲಿದ್ದ ತಿರಸ್ಕಾರದಿಂದ ಕಂಗೆಟ್ಟಿದ್ದರೂ ರಕ್ಷಾ ಅವಮಾನದಿಂದೆದ್ದ ಗರ್ವದಿಂದ ಸೆಟೆದು ನಿಂತಿದ್ದಳು. ಜಗಲಿ ಮೇಲೆ ನಿಂತಿದ್ದ ತಾಯಿಯತ್ತ ನೋಡಿದಳು. ಅವಳ ಮಡಿಲಲ್ಲಿ ಮುಖ ಹುದುಗಿಸಿ ಏನೇನೋ ಹೇಳಬೇಕೆನಿಸಿತು. "ಪೊಪ್ಪ ಹೇಳಿದ್ದು ಕೇಳ್ಲಿಲ್ವಾ? ನನ್ನ ಮುಖ ನೋಡ್ಬೇಡ. ನಮ್ಮ ಮಾನ ತೆಗ್ದಿದ್ದು ಸಾಲ್ದು ಅಂತ ಮತ್ತೆ ಯಾಕೆ ಬಂದೆ ಇಲ್ಲಿಗೆ. ಈ ಇವಳನ್ನಾದ್ರೂ ಮರ್ಯಾದಿಗೆ ಬದುಕಲಿಕ್ಕೆ ಬಿಡು" ದೀಕ್ಷಾಳನ್ನೆಳೆದುಕೊಂಡು ಕುಸುಮ ಒಳ ನಡೆದಳು.

"ಭಗವತಿಯಮ್ಮನಿಗೆ ಕಾರಣೀಕ ಇದ್ರೆ ಒಂದು ದಿನ ನೀನು ಹೀಗೆ ಬಂದು ನಿಲ್ತಿ ಅಂತ ಗೊತ್ತಿತ್ತು. ಭಗವತಿಯ ಕಾರಣೀಕ ಅಂದ್ರೆ ಸುಮ್ಮನೆಯಾ? ಅನ್ಯಾಯ ಮಾಡಿದವರಿಗೆ ಗಳಿಗ್ಗೆಯಲ್ಲಿ ತನ್ನ ಶಕ್ತಿ ತೋರಿಸ್ತಾಳೆ. ನನ್ನ ಅಂಗಳದಿಂದ ಮೊದಲು ತೊಲಗಿ ಸಾಯಿ" ಅನ್ನುತ್ತ ಸುರೇಶ ಮನೆಯೊಳಗೆ ನುಗ್ಗಿ ರಬಕ್ಕನೆ ಬಾಗಿಲು ಮುಚ್ಚಿದ.

"ಸೈತಾನ ಹೇಳಿದ ಹಾಗೆ ಕುಣಿಯುವವರಿಗೆ ಅನ್ಯಾಯದ ಬಗ್ಗೆ ಮಾತಾಡ್ಲಿಕ್ಕೆ ಹಕ್ಕುಂಟ